ಹೊತ್ತಿಗೆ, ಆತನ ಮೊಬೈಲ್ ಚಾಲನೆಗೆ ಬಂದು, ತುಸು ಹೊತ್ತಿನಲ್ಲೇ ಸ್ತಬ್ಧವಾಗಿದೆ. ಆ ಹೊತ್ತಿಗೆ ಆತ ಬಸ್ ನಿಲ್ದಾಣದ ಸನಿಹವಿದ್ದ!"

"ಹೌದೇ? ಆ ಹೊತ್ತಿಗೆ ನಾನಲ್ಲೇ ಗುರುವನೊಂದಿಗಿದ್ದೆ. ಶಮಿಯ ಮನೆಯೊಳಗೆ ಹಾವು ಇಳಿಸಿದವನು ಗುರುವನೇ. ಮಾಡಿಸಿದವರಾರು ಗೊತ್ತೇ? ಕಾಂಡೇರ ಉತ್ತಯ್ಯ!"

"ಓಹ್! ನನ್ನ ಅನುಮಾನ ನಿಜವಾಯಿತು. ಅಲ್ಲಿ ಹಾವುಗಳ ವಾಸವಿದೆಯೆಂದು ಅವ್ನೇ ಹೇಳಿದ ಮೇಲೆ, ಹಾವಿನ ಪ್ರಯೋಗ ಆತನೇ ಮಾಡಿರಬೇಕೆಂದು ತರ್ಕಿಸಿದೆ."

"ಈ ರಂಜು ಏಕೆ ಮೊಬೈಲ್ ಸ್ವಿಚ್ ಆಫ್ ಮಾಡಿರುತ್ತಾನೆ? ಈ ರಾತ್ರಿಯ ಸಾಹಸ ಏನು?"

"ಕೇವಲ ಅನುಮಾನಗಳಷ್ಟೇ. ನನ್ನ ಊಹೆಯಂತೆ, ಜೋಯಪ್ಪ ಪಿಕ್ ಪಾಕೆಟ್ ಮಾಡಿದ್ದು ರಂಜುವಿನ ಪರ್ಸನ್ನೇ. ತಿಮ್ಮಯ್ಯನಿಂದ ರಂಜುವಿಗೆ ಕರೆ ಹೋಗಿದೆ. ರಂಜು ತಿಮ್ಮಯ್ಯನಿಗೆ ಹೊಸ ಪರಿಚಯವೆನ್ನುವುದಕ್ಕೆ ಕಳೆದ ಮೂರು ತಿಂಗಳಲ್ಲಿ ಹದಿನೈದು ದಿನಗಳ ಹಿಂದೆಯಷ್ಟೇ ಆತನಿಗೆ ಕರೆ ಮಾಡಿದ್ದೇ ಸಾಕ್ಷಿ. ರಂಜು ಯಾವಾಗಲೂ ತನ್ನ ಮೊಬೈಲನ್ನು ಸ್ತಬ್ಧವಾಗಿರಿಸಲು ಆತನ ವೃತ್ತಿಯೇ ಕಾರಣವಾಗಿರಬೇಕೆಂದು ತರ್ಕಿಸಬಹುದು. ಯಾವ ವೃತ್ತಿ? ಯಾವುದೋ ಅಪರಾಧವಿಲ್ಲದೇ ಇದ್ದರೆ, ಮೊಬೈಲನ್ನು ಸ್ವಿಚ್ ಆಫ್ ಯಾಕೆ ಮಾಡಬೇಕು? ಒಂದೊಂದು ಬಿಂದುಗಳನ್ನು ಜೋಡಿಸಬೇಕಷ್ಟೇ."

"ರಾತ್ರಿ ನಿದ್ದೆ ಏಕೆ ಬಿಡಬೇಕು?"

"ನಾವೀಗ ಶಮಿಯ ಮನೆಗೆ ಹೋಗೋಣ. ನನ್ನೆಣಿಕೆ ನಿಜವಾದರೆ, ರಂಜು ನಮಗೆ ಅಲ್ಲಿ ಸಿಗುತ್ತಾನೆ."

ನಾನೂ ಹುರುಪಿನಿಂದಲೇ ಇರುಳಿನ ಸಾಹಸಕ್ಕೆ ಅಣಿಯಾದೆ.

ನಾವು ಇಗ್ಗುತ್ತಪ್ಪ ಗುಡಿಯ ಸನಿಹ ಬಂದಾಗ, ಗಂಟೆ ಹತ್ತು ದಾಟಿತ್ತು. ಗುಡಿಯ ಆವರಣ ನಿರ್ಜನವಾಗಿತ್ತು. ಅಲ್ಲಿದ್ದ ಕಲ್ಲು ಬೆಂಚಿನ ಮೇಲೆ ಕುಳಿತಾಗ, ಬೀದಿ ದೀಪದ ಮಂದ ಬೆಳಕಲ್ಲಿ ಶಮಿಯ ಮನೆ ಗೋಚರಿಸುತ್ತಿತ್ತು. ಕತ್ತಲಲ್ಲಿದ್ದ ನಾವು ಯಾರ ದೃಷ್ಟಿಗೂ ಬೀಳುತ್ತಿರಲಿಲ್ಲ. ನಿಧಾನವಾಗಿ ಸಮಯ ಜಾರುತ್ತಿತ್ತು.

ಆಯಾಸದಿಂದ ತೂಕಡಿಸುವಾಗ, ಅಲುಗಾಡಿಸಿ ಎಚ್ಚರಿಸಿದ ಕರಮಚಂದ ಪಿಸುಗುಟ್ಟಿದ,

"ನೋಡಲ್ಲಿ, ರಂಜು ಬಂದ!"

ಚೀಲ ಹಿಡಿದುಕೊಂಡ ಗಿಡ್ಡನೆಯ ವ್ಯಕ್ತಿಯೋರ್ವ ಪಾಗಾರ ಹಾರಿ ಶಮಿಯ ಮನೆಯ ಬಾಗಿಲ ಸನಿಹ ಬಂದ. ಬಾಗಿಲ ಬಳಿ ನಿಂತ ಆತ ಏನೋ ಮಾಡುತ್ತಿರುವಂತೆ ಕಾಣಿಸಿತು. ಪ್ರಾಯಶಃ ಬೀಗ ಮುರಿಯುತ್ತಿರಬೇಕು! ಕೊಂಚ ಹೊತ್ತಲ್ಲಿ ಆತ ಒಳ ಹೋಗಿದ್ದು ಕಂಡಿತು.

"ಡಿಸೋಜನಿಗೆ ಕರೆ ಮಾಡು. ಆತನಿಗೆ ಸೂಚನೆ ನೀಡಿದ್ದೇನೆ."

ನಂತರ ಒಂದೇ ಉಸಿರಿಗೆ ಧಾವಿಸಿ, ನಾವು ಬಾಗಿಲ ಸನಿಹ ಬಂದೆವು. ಕರಮಚಂದ ಜೇಬಿನಿಂದ ರಿವಾಲ್ವರ್ ಹೊರಗೆಳೆದ. ಮನೆಯೊಳಗೆ



ಕತ್ತಲು ತುಂಬಿತ್ತು. ಒಳಗಡೆಯಿಂದ ಏನನ್ನೋ ಲಯಬದ್ಧವಾಗಿ ಬಡಿಯುವ ಸದ್ದು! ಬೆಕ್ಕಿನ ಹೆಜ್ಜೆ ಹೂಡಿ, ನಾವು ಒಳಗಡಿಯಿರಿಸಿದೆವು. ಬಲಭಾಗದ ಮಲಗುವ ಕೊಠಡಿಯಲ್ಲಿ ಟಾರ್ಚ್ ಬೆಳಕು ಕಾಣಿಸಿತು. ಆ ವ್ಯಕ್ತಿ ಸಲಾಕೆಯೊಂದರಿಂದ ಗೋಡೆಯಲ್ಲಿ ರಂಧ್ರ ಕೊರೆಯುತ್ತಿದ್ದ.

"ಕೈ ಮೇಲೆತ್ತು. ಅಲುಗಾಡಿದರೆ ಶೂಟ್ ಮಾಡ್ತೀನಿ." ಕರಮಚಂದ ಅಬ್ಬರಿಸಿದ. ಆತ ಸಲಾಕೆಯನ್ನು ನೆಲಕ್ಕೆಸೆದು, ಕೈ ಮೇಲೆತ್ತಿದ. ನಾನು ತಡಕಾಡಿ, ದೀಪ ಹಾಕಿದೆ.

"ಅಂಜಪರವಂಡ ರಂಜು ಅಂದರೆ ನೀನೇ ಅಲ್ವೇ?"

"ಹೌದು, ನಿಮಗೆ ಹೇಗೆ ಗೊತ್ತಾಯ್ತು?"

"ನಿನ್ಗೆ ತಿಮ್ಮಯ್ಯ ಯಾಕೆ ಕರೆ ಮಾಡಿದ್ದು? ಗೋಡೆಯಲ್ಲಿ ಹುದುಗಿಸಿರುವ ಮೂರ್ತಿ ತೆಗೆಯಲೇ?"

ಆತ ಹೂಂಗುಟ್ಟಿದ. ನನಗೆ ಏನೊಂದೂ ಅರ್ಥವಾಗಲಿಲ್ಲ.

"ಬಿದ್ದಪ್ಪ, ಚೆಂಗಪ್ಪನ ತಂದೆ ಮಾಚಯ್ಯ ಇಗ್ಗುತ್ತಪ್ಪ ಗುಡಿಯ ಪರಿಚಾರಕನಾಗಿದ್ದ ಅಂತ ಶಮಿ ಹೇಳಿದ್ದನಲ್ವೇ? ಈ ಗೋಡೆಯಲ್ಲಿ ಇಗ್ಗುತ್ತಪ್ಪ ದೇವರ ಚಿತ್ರ ಬರೆದು, ಪೂಜೆ ಮಾಡಿದ ಕುರುಹು ಕಂಡು ನನಗೆ ವಿಚಿತ್ರವೆನಿಸಿತು. ಪ್ರತ್ಯೇಕ ದೇವರಕೋಣೆ ಇರುವಾಗ ಇದರ ಅಗತ್ಯವೇನು? ನಾನು ಇಗ್ಗುತ್ತಪ್ಪ ಗುಡಿಯ ಇತಿಹಾಸ ಅಧ್ಯಯನ ಮಾಡಿದೆ. ಇಪ್ಪತ್ತೈದು ವರ್ಷಗಳ ಹಿಂದೆ ಅಲ್ಲೊಂದು ವಿಗ್ರಹ ಕಳವಿನ ಪ್ರಕರಣ ವಿರಾಜಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು. ಆಮೇಲೆ ಕಳ್ಳನೂ, ವಿಗ್ರಹವೂ ಪತ್ತೆಯಾಗದೆ, ಆ ಪ್ರಕರಣವನ್ನು ಪೊಲೀಸರು ಮುಗಿಸಿದ್ದರು. ಪತ್ರಿಕೆಗಳಲ್ಲಿ ಈ ಬಗ್ಗೆ ವರದಿಯಾಗಿದ್ದು, ನನ್ನ ತಂತ್ರಾಂಶದಲ್ಲಿತ್ತು. ಈಗ ಶಮಿ ಜಾಗ ಮಾರಾಟ ಮಾಡುವ ಯೋಚನೆ ಮಾಡಿದಾಗ, ಆ ವಿಗ್ರಹ ತೆಗೆಯಲು ಚೆಂಗಪ್ಪ ಯೋಜನೆ ಹಾಕಿದ್ದಾನೆ. ತಿಮ್ಮಯ್ಯನಿಗೆ ತಾನೇ ಈ ಕೆಲಸ ಮಾಡಬಹುದಿತ್ತು. ಆದರೆ ಶಮಿಗೆ ಅನುಮಾನ ಬಂದರೆ, ತೊಂದರೆಯಾಗುವುದೆಂದು ಭಾವಿಸಿರಬೇಕು. ಅದಕ್ಕಾಗಿ ಕಳ್ಳತನದ ರೂಪ ಕೊಟ್ಟ. ಅದಕ್ಕೇ ಒಬ್ಬ ವೃತ್ತಿಪರ ಕಳ್ಳನ ಸಹಕಾರ ಪಡೆಯಲು ನಿರ್ಧರಿಸಿರಬೇಕು. ಮೇಲುನೋಟಕ್ಕಾಗ ಇದೊಂದು ಕಳವಿನಂತೆ ಕಾಣುತ್ತೆ."

"ಆದರೆ ಈ ರಂಜು ವಿಗ್ರಹವನ್ನು ಎತ್ತಿಕೊಂಡು ಪರಾರಿಯಾದರೆ?"

"ತಿಮ್ಮಯ್ಯ ಘಾಟಿ ಆಸಾಮಿ. ನನ್ನೊಂದಿಗೆ ಕದಿಯಲು ಹೇಳಿದ್ದನ್ನು ಮೊಬೈಲಿನಲ್ಲಿ ವಿಡಿಯೋ ಮಾಡಿಕೊಂಡಿದ್ದಾನೆ. ಈಗ ನನ್ನ ಜೊತೆಯೇ ಬೈಕಿನಲ್ಲಿ ಬಂದು ಪಕ್ಕದ ರಸ್ತೆಯಲ್ಲಿ ಕಾಯುತ್ತಿದ್ದಾನೆ." ರಂಜು ಉತ್ತರಿಸಿದ.

ಕೆಲದಿನಗಳ ಹಿಂದೆ ತಾನು ಮನೆಯೊಳಗೆ ಪರೀಕ್ಷಿಸಿರುವುದಾಗಿಯೂ, ತನ್ನ ಪರ್ಸು ಕದ್ದು ಹೋಗಿರುವುದಾಗಿಯೂ ಒಪ್ಪಿಕೊಂಡ ರಂಜು, ಸಂಜೆ ಏಳೂವರೆಗೆ ತಿಮ್ಮಯ್ಯನಿಗೆ ಕರೆ ಮಾಡಿದ್ದೆಯೆಂದ. ಈಗಲೂ ಆತ ಧರಿಸಿದ್ದುದು ನೈಕ್ ಶೂ!

ಅಷ್ಟರಲ್ಲಿ ಹೊರಗಡೆ ವಾಹನದ ಸದ್ದು. ಡಿಸೋಜ ತನ್ನ ಸಂಗಡಿಗರೊಂದಿಗೆ ಬಂದ. ಕರಮಚಂದನ ಸೂಚನೆಯಂತೆ ಪೇದೆಗಳು ಪಕ್ಕದ ರಸ್ತೆಗೆ ತೆರಳಿ, ತಿಮ್ಮಯ್ಯನನ್ನು ಹಿಡಿದು ತಂದರು.

"ತಿಮ್ಮಯ್ಯ, ಕೊನೆಗೆ ಒಂದೇ ಅನುಮಾನ. ಈ ಗೋಡೆಯೊಳಗೆ ಮಾಚಯ್ಯ ವಿಗ್ರಹ ಹೇಗೆ ಇರಿಸಿದ ಎಂಬ ಬಗ್ಗೆ ಚೆಂಗಪ್ಪ ಹೇಳಿದ್ದಾನೆಯೇ?" ಕರಮಚಂದನ ಪ್ರಶ್ನೆ.

"ಮಾಚಯ್ಯ ದೇವಳದಲ್ಲಿ ಪರಿಚಾರಕನಾಗಿರುವುದರ ಜೊತೆಗೆ ಮನೆ ನಿರ್ಮಾಣದ ಗುತ್ತಿಗೆ ವಹಿಸಿಕೊಳ್ತಿದ್ದನಂತೆ. ಈ ಮನೆಯನ್ನು ಕಟ್ಟಿದ್ದು ಅವ್ನೇ. ಆವಾಗ ದೇವಸ್ಥಾನದಲ್ಲಿ ಯಾವುದೋ ಮನಸ್ತಾಪ ಬಂದು, ಮಾಚಯ್ಯನನ್ನು ಕೆಲಸದಿಂದ ತೆಗೆದರು. ಕೋಪದಿಂದ ವಿಗ್ರಹ ಅಪಹರಿಸಿ ನಿರ್ಮಾಣಗೊಳ್ಳುತ್ತಿದ್ದ ಮನೆಯ ಗೋಡೆಯೊಳಗೆ ಅಡಗಿಸಿಟ್ಟನಂತೆ. ದೇವರ ಭಯದಿಂದ ಮೂರ್ತಿಗೆ ಪೂಜೆ ಮಾಡಲೋಸುಗ, ಯಾರಿಗೂ ಅನುಮಾನ ಬಾರದಿರಲೆಂದು ಗೋಡೆಯ ಮೇಲೆ ಚಿತ್ರ ಬಿಡಿಸಿ, ಪೂಜೆ ಮಾಡ್ತಿದ್ದನಂತೆ."

"ಕೀಯನ್ನೊಮ್ಮೆ ಉತ್ತಯ್ಯನಲ್ಲಿ ಕೊಟ್ಟಿದ್ದೆ ಅಂದಿದ್ದು ಸುಳ್ಳಲ್ವೇ?"

"ಹೌದು. ಶಮಿ ಕರೆ ಮಾಡಿ, ಯಾರೋ ಮನೆಯ ಬಾಗಿಲು ತೆರೆದಂತಿದೆ ಎಂದಾಗಲೇ ನನಗೆ ಅನುಮಾನವಾಯಿತು. ರಂಜು ಮನೆಯೊಳಗೆ ಹೋಗಿದ್ದು ಗೊತ್ತಾಗಿರಬೇಕೆಂದು ಹಾಗೆ ಸುಳ್ಳು ಹೇಳಿದೆ."

ತಿಮ್ಮಯ್ಯ ಮನೆಯ ವಿಳಾಸ ಹೇಳಿದಾಗ, ವಿಗ್ರಹವಿರುವ ಗೋಡೆ ದೇವಸ್ಥಾನದ ಸೈಡಿದ್ದು ಅಂತ ಹೇಳಿದ್ದನ್ನು ಬರೆದುಕೊಂಡೆಯೆಂದು ರಂಜು ತಿಳಿಸಿದ. ಪುರಾತನ ವಿಗ್ರಹ ಕಳ್ಳತನವನ್ನು ಮುಚ್ಚಿಟ್ಟ ಆರೋಪದ ಮೇಲೆ ಡಿಸೋಜ ಅವರಿಬ್ಬರನ್ನು ಬಂಧಿಸಿದ. ಚೆಂಗಪ್ಪನ ಮೇಲೂ ಪ್ರಕರಣ ದಾಖಲಾಯಿತು. ಮನೆಯ ವಿಳಾಸವನ್ನು ಗೀಚಿದ ಬರಹ ಅವರ ಹಣೆಬರಹವನ್ನೇ ಬದಲಿಸಿತು. ಶಮಿಯ ಮೇಲೆ ಹಲ್ಲೆ ಮಾಡಿಸಿದ್ದು ಕಿಶುವೆಂದು ಕೆಲದಿನಗಳ ನಂತರ ಡಿಸೋಜ ತಿಳಿಸಿದ.

ಪ್ರತಿಕ್ರಿಯಿಸಿ: feedback@sudha.co.in